ದಿನಾಂಕ :29-03-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 4 ರವರ ಪರ ವಕೀಲರಿಂದಃ</u>

ನನ್ನ ಅಣ್ಣಂದಿರು ನನ್ನ ತಂದೆಯ ಕಾಲದಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದರು ಅಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕೃಷ್ಣೋಜೀರಾವ್ ತಮಗೆ ಪಾಲು ವಿಭಾಗದಲ್ಲಿ ಬಂದ ಆಸ್ತಿ ಐಟಂ ನಂ.8 ರಿಂದ 10 ಇವುಗಳನ್ನು 4 ನೇ ಪ್ರತಿವಾದಿಯವರ ತಂದೆ ಶಿವಣ್ಣ ಬಿನ್ ಬಸವೇಗೌಡ ಇವರಿಗೆ ಮಾರಾಟ ಮಾಡಿದರು ಅಂದರೆ ಗೊತ್ತಿಲ್ಲ. ದಿಃ 25-01-1999 ರಂದು ನೊಂದಾಯಿತ ಕ್ರಯ ಪತ್ರ ಆಗಿದೆ ಅಂದರೆ ಗೊತ್ತಿಲ್ಲ ಆ ಮಾರಾಟ ಪತ್ರದ ಆಧಾರದಲ್ಲಿ ಸದರಿ ಐಟಂ ನಂ.8 ರಿಂದ 10 ಶಿವಣ್ಣ ನವರ ಹೆಸರಿಗೆ ಎಂ ಆರ್ ಆಗಿದೆ ಅಂದರೆ ನನಗೆ ಗೊತ್ತಿಲ್ಲ. ಶಿವಣ್ಣ ನವರಿಗೆ 4 ಜನ ಮಕ್ಕಳು ಅಂದರೆ ನನಗೆ ಗೊತ್ತಿಲ್ಲ. ದಿಃ 15-01-2003 ರಲ್ಲಿ ಶಿವಣ್ಣನವರ ಮಕ್ಕಳು ತಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನು ಭಾಗ ಮಾಡಿಕೊಂಡರು ಅಂದರೆ ನನಗೆ ಗೊತ್ತಿಲ್ಲ. ಐಟಂ ನಂ.8 ರಿಂದ 10 ಇದು ಪ್ರತಿವಾದಿ 4 ರವರಿಗೆ ಬಂದಿದೆ ಅಂದರೆ ಗೊತ್ತಿಲ್ಲ. 4 ನೇ ಪ್ರತಿವಾದಿ ಮೋಹನ ರವರ ಹೆಸರಿಗೆ ಐಟಂ ನಂ.8 ರಿಂದ 10 ಆಸ್ತಿಗಳು ಎಂ ಆರ್ ಮುಖಾಂತರ ವರ್ಗಾವಣೆ ಆಗಿವೆ ಅಂದರೆ ಗೊತ್ತಿಲ್ಲ. 4 ನೇ ಪ್ರತಿವಾದಿ ಅಂದಿನಿಂದ ದಾವಾ ಐಟಂ ನಂ.8 ರಿಂದ 10 ನ್ನು ಮಾಲೀಕರಾಗಿ ಅನುಭವಿಸಿಕೊಂಡು ಇದ್ದಾರೆ ಅಂದರೆ ಗೊತ್ತಿಲ್ಲ. ಅವರು ಸದರಿ ಆಸ್ತಿಗಳಲ್ಲಿ ಬೋರ್ ವೆಲ್ ಕೊರೆಸಿ ತೆಂಗಿನ ತೋಟ, ಅಡಿಕೆ ತೋಟ ಮಾಡಿಕೊಂಡಿದ್ದಾರೆ ಅಂದರೆ ಗೊತ್ತಿಲ್ಲ. ಸದರಿ ಆಸ್ತಿಯ ಮೇಲೆ 4 ನೇ ಪ್ರತಿವಾದಿ ಎಸ್ ಬಿ ಎಂ ಬ್ಯಾಂಕ್ ನಲ್ಲಿ ಸಾಲ ತೆಗೆದುಕೊಂಡಿದ್ದಾರೆ ಅಂದರೆ ಗೊತ್ತಿಲ್ಲ. ಇದೆಲ್ಲಾ ನನಗೆ ಗೊತ್ತಿದ್ದರೂ ಕೂಡ ಆಸ್ತಿ ಹೊಡೆಯಲು ನಾನು ಸುಳ್ಳು ದಾವೆ ಮಾಡಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫಸಿ, ಗುಬ್ಬಿ.